ಅಲಿಖಿತ ಒಪ್ಪಂದವಾದಂತೆ ಅವನ ಮಾತುಕತೆ. ಹಾಗೆಂದು ಅವನೇನೂ ಬೇಜವಾಬ್ದಾರಿಯವನಲ್ಲ. ಹೆಂಡತಿ ಎಂದರೆ ಮನೆಯಲ್ಲಿನ ಒಂದು ನಾಯೋ, ಬೆಕ್ಕೋ, ಹಸುವೋ... ಹಾಗೆ, ತಿಂಗಳ ಸಾಮಾನು ತಂದು ಹಾಕಿ ತರಕಾರಿ ಹಣ್ಣು–ಹಂಪಲುಗಳಿಗೆ ಹಣ ಕೊಟ್ಟರೆ ಮುಗಿಯಿತು. ವರ್ಷಕ್ಕೆ ನಾಕು ಸೀರೆಯ ಸಂಭ್ರಮ ಬಿಟ್ಟರೆ ಮತ್ತೇನು ವಿಶೇಷವಿಲ್ಲ. ಅವಳನ್ನು ಎಲ್ಲಿಗಾದರೂ ಕರೆದೊಯ್ಯಬೇಕಾದರೆ ಅದು ಕೇವಲ ಅವನ ನೆಂಟರ ಮನೆಯ ಮದುವೆ, ಮುಂಜಿ, ಗೃಹಪ್ರವೇಶ, ತಿಥಿ... ಇತ್ಯಾದಿಗಳಿಗಷ್ಟೆ. ಅದೂ ತುಂಬಾ ಹತ್ತಿರದವರ ಮನೆಗಳಿಗೆ ಮಾತ್ರ! ಅದು ಪ್ರೀತಿಯೋ ಅನ್ಯೋನ್ಯತೆಯೋ ಉಪೇಕ್ಷೆಯೋ... ಇಂಥದ್ದೇ ಅಂತಲ್ಲ. ಸ್ವತಃ ರಾಮಣ್ಣನಿಗೂ ಅದು ಅರ್ಥವಾಗಿರಲಿಲ್ಲ. ಒಟ್ಟಾರೆ ಆರಕ್ಕೇರದೆ ಮೂರಕ್ಕಿಳಿಯದ ಬದುಕು. ಅವಳು ಮಾಡಿದ ತಿಂಡಿ ಅಡುಗೆ ಅದೆಷ್ಟೇ ಚೆನ್ನಾಗಿರಲಿ... ಕಮಕಿಮಕೆನ್ನದೆ ತಿಂದೇಳುತ್ತಾನೆ. ಕಡ್ಡಾಯವಾಗಿ ಭಾನುವಾರದಭ್ಯಂಗವನ್ನು ಅವಳೇ ನಡುಕಟ್ಟಿ ಮಾಡಿಸಬೇಕು... ಅವಳ ತವರಿನವರು ಬಂದರೆ ತುಸು ಅಸಹನೆ ಅಸಮಾಧಾನ. ತನ್ನ ತಾಯಿ, ಸೋದರಮಾವನಿಗೆ ಮಾಡುವ ಉಪಚಾರದಲ್ಲಿ ಇಷ್ಟೇ ಕೊರತೆಯಾದರೂ ಉರಿದೇಳುತ್ತಾನೆ... ತನ್ನೊಬ್ಬ ಮಗ ಸಣ್ಣಪುಟ್ಟ ತುಂಟಾಟ ಮಾಡಿದರೂ ಹೆಂಡತಿಯತ್ತ ಕಿಡಿಗಣ್ಣು ಬಿಡುತ್ತಾನೆ. ಒಟ್ಟಾರೆ ಅವಳಿಗೆ ಅಂದರೆ ಅವನ ಹೆಂಡತಿ ರುಕ್ಮಿಣಿಗೆ ಅವನೊಂದಿಗಿನ ಬದುಕೆಂದರೆ ಹಗ್ಗದ ಮೇಲಿನ ನಡಿಗೆಯಂತೆ. ಈವರೆಗೂ ಮನೆಯಲ್ಲಿ ಅತ್ತೆಯೊಬ್ಬಳಿಗೆ ಮಾತ್ರ ಅಂಜಿಕೊಂಡು ಗಂಡನೊಂದಿಗೆ ಏಗುತ್ತಾ ಕಿರಿ ವಯಸ್ಸಿಗೇ ಮಾಗುತ್ತಿದ್ದ ರುಕ್ಮಿಣಿಗೆ ಹೊಸದೊಂದು ತಲೆನೋವು ಬಂದಿದ್ದು ಅತ್ತೆ, ಪಾಂಡು ಮಾಮನನ್ನು ಇಲ್ಲೇ ಇರಲು ಕರೆತಂದಾಗ. ಪಾಂಡು ಮಾಮನ ಹೆಂಡತಿ ಭಾಗ್ಯಲಕ್ಷ್ಮಿ ಇದ್ದಕ್ಕಿದ್ದಂತೆ ಕಾಲುಜಾರಿ ನೆಲಬಾವಿಯಲ್ಲಿ ಬಿದ್ದು ವೈಕುಂಠವಾಸಿಯಾದ ಲಾಗಾಯ್ತಿನಿಂದ ತನ್ನ ತವರಿಗೆ ಹೋಗಿ ಎಲ್ಲ ಕಾರ್ಯ ಮುಗಿಸಲು ಮುಂದಾಳತ್ವ ವಹಿಸಿದ್ದ ಶಾರಕ್ಕ, ಅಲ್ಲೇ ಕೆಲ ದಿನ ಇದ್ದು, 'ತಮ್ಮನನ್ನು ಒಬ್ಬನೇ ಬಿಟ್ಟರೆ ತಾವ್ಯಾಕೆ ಬಳಗವಾಗಬೇಕು? ಬೆನ್ನಿಗೆ ಬಿದ್ದ ತಮ್ಮ ತಾನಲ್ಲದೆ ಅವನಿಗೆ ಯಾರಾಗಬೇಕು? ಮಕ್ಕಳಾ ಮರಿಯಾ...' ಎಂದು ಮಗನ ಒಪ್ಪಿಗೇನೂ ಕೇಳದೆ ಇದ್ದಕ್ಕಿದ್ದಂತೆ ಬಂದಿಳಿದಾಗ ರಾಮಣ್ಣನಿಗೂ ಅಷ್ಟೇನೂ ಪ್ರಿಯವಲ್ಲದಿದ್ದರೂ ಸಹಿಸಿಕೊಳ್ಳಬೇಕಾಯ್ತು, ಅಮ್ಮನಿಗಾಗಿ. ರುಕ್ಮಿಣಿಯ ಒಪ್ಪಿಗೆ ಕೇಳುವ ಪರಿಪಾಠ ಆ ಮನೆಯಲ್ಲಿ ಯಾರಿಗೂ ಇರಲೇ ಇಲ್ಲ. ಬಂದ ಮಾರನೆ ಬೆಳಿಗ್ಗೆ... ರಾಮಣ್ಣ ತನ್ನ ಬೆಳಗಿನ ಪೂಜೆ ತಿಂಡಿಗಳನ್ನು ಮುಗಿಸಿ ಅಂಗಡಿಗೆ ಹೋದಮೇಲೆ... ಪಾಂಡು ಮಾಮ ತನ್ನ ಬಟ್ಟೆಬರೆಗಳ ಜೊತೆ ತಂದಿದ್ದ ಗಣಪತಿ ಯಂತ್ರವನ್ನು ಜತನದಿಂದ ತೆಗೆದು, 'ಶಾರಕ್ಕ, ಇದು ಹಜಾರದಲ್ಲಿ ಹಾಕಬೇಕು ಪೂರ್ವಕ್ಕೆ ಮುಖವಾಗಿ' ಎಂದ. 'ಅದು ಅಲ್ಲಿಡು, ರಾಮಣ್ಣ ಬಂದ ಮೇಲೆ ಎಲ್ಲಿ ಹಾಕೋದಂತ ನೋಡಣ' ಎಂದ ಶಾರಕ್ಕನ ಮಾತಿಗೇನೂ ಕೇರು ಮಾಡದೆ 'ಅಯ್ಯೋ... ಇದು ಹಾಕಕ್ಕೆ ರಾಮಣ್ಣ ಬರಬೇಕಾ? ರುಕ್ಮಿಣಿ ಒಂದು ಮೊಳೆನೂ ಗುಂಡುಕಲ್ಲು ತಾಂಬಾ' ಎಂದ. ಅವಳು ಅತ್ತೆಯ ಮುಖವನ್ನೇ ನೋಡುತ್ತಾ ನಿಂತಳಾಗಿ ಶಾರಕ್ಕ, 'ಹೇಳಿದ್ದು ಕೇಳಿಸ್ಲಿಲ್ವೇನೇ... ಅಬ್ಬಬ್ಬ... ಅದೇನು ಹೆಣ್ಣು ಮಕ್ಕಳೋ...' ಎಂದು ಬಿಟ್ಟಳು. ರುಕ್ಮಿಣಿ ಅಂಜುತ್ತಂಜುತ್ತಾ, 'ಅಲ್ಲ... ಈ ಗೋಡೆ ಮಧ್ಯಕ್ಕೆ ಒಂದು ಮೊಳೆ ಇದೆ. ನೋಡಿ, ಅದೇ ಆಗುತ್ತ ಅಂತ' ಎಂದಳು. ಪಾಂಡು ಮಾಮ, 'ಎಲ್ಲಿ ತೋರ್ಸು' ಎಂದರು. ಅಲ್ಲೇ ಇದ್ದ ಮರದ ಕುರ್ಚಿಯನ್ನು ಗೋಡೆಯ ಹತ್ತಿರಕ್ಕೆಳೆದಕೊಂಡು, ಮೇಲೆ ಹತ್ತಿ ಬಲಗೈಯೆತ್ತಿ ಆ ಮೊಳೆಯನ್ನು ಮುಟ್ಟಿ ತೋರಿಸಿದ್ದೇ ತಡ, ಪಾಂಡು ತನ್ನ ಕೈಯಲ್ಲಿದ್ದ ಬೆಳ್ಳಿಪಟವನ್ನು ಅವಳ ಕೈಗೆ ವರ್ಗಾಯಿಸಿ, 'ಸರಿ ಹಾಕು ಅಲ್ಗೆ' ಎಂದಾಗ ಅವಳದನ್ನು ಹಾಕಿ ಬಿಟ್ಟು... ಆ ಮೇಲೆ ಅವಳು ತನ್ನ ನಿತ್ಯದ ಗೃಹಕೃತ್ಯದಲ್ಲಿ ತೊಡಗಿಸಿಕೊಂಡು ಮರೆತೂ ಬಿಟ್ಟಳು. ಅವಳು ಆ ಕಡೆ ಗೋಡೆಗೆ ಮುಖಮಾಡಿ ನಿಂತಿದ್ದಾಗ ಅವಳ ಬೆನ್ನ ಹಿಂದಿನ ಕಣ್ಣುಗಳನ್ನು ಯಾರೂ ಗಮನಿಸಿರಲಿಲ್ಲ. ಅವಳಿಗನ್ನಿಸಿದ್ದಿಷ್ಟೆ... ಈವರೆಗೂ ಎಂದೂ